ಮರುಕಳಿಕೆ

# ನೀಲಗಿರಿ ಸೀಮೆಯ ಪರಂಜ್ಯೋತಿ

## ಕನ್ನಡ-ತಮಿಳು ಸಂಸ್ಕೃತಿಗಳ ಸೇತು ಕೆ.ಪಿ. ಸ್ವಾಮಿ (ಜೂನ್ 10, 1936 - ಜುಲೈ 04, 2019)

### ಆಪ್ತನೆನಪು



**ರಹಮತ್ ತರೀಕೆರೆ**

ನನ್ನ ಪ್ರಿಯ ಪ್ರಕಾರ ಆತ್ಮಕತೆ ಅಥವಾ ಅನುಭವ ಕಥನ. ಅದರಲ್ಲೂ ಕೃಷಿ, ವ್ಯಾಪಾರ, ಉದ್ಯಮ, ವೈದ್ಯಕೀಯ, ಆಡಳಿತ, ಇಂಜಿನಿಯರಿಂಗ್ ಕ್ಷೇತ್ರದವರು ಮಾಡುವ ಬರಹಗಳ ಬಗ್ಗೆ ಹೆಚ್ಚು ಆಕರ್ಷಣೆ. ಬಾಳಿನ ಬೇರೆಬೇರೆ ಕ್ಷೇತ್ರಗಳಲ್ಲಿ ದುಡಿದವರು ತಮ್ಮ ನೆನಪುಗಳನ್ನು ದಾಖಲಿಸುವಾಗ, ಹೊಸ ಅನುಭವಲೋಕ ಮಾತ್ರವಲ್ಲ, ಹೊಸಭಾಷೆ ಮತ್ತು ವಿಶಿಷ್ಟ ಚಿಂತನಕ್ರಮಗಳೂ ಹಾಯುತ್ತವೆ. ಈ ಕಾರಣಕ್ಕೆ ಅಧಿಕಾರಿಗಳಾಗಿದ್ದ ನವರತ್ನ ರಾಮರಾಯರ 'ಕೆಲವು ನೆನಪುಗಳು', ವಿ. ಬಾಲಸುಬ್ರಮಣಿಯನ್ ಅವರ 'ಕಲ್ಯಾಣ ಕೆಡುವ ಹಾದಿ', ವೈದ್ಯ ನಾಗಲೋಟಿಮಠ ಅವರ 'ಬಿಚ್ಚಿದ ಜೋಳಿಗೆ', ನಟಿ ಶಾಂತಾ ಹುಬ್ಳೀಕರರ 'ನಾಳಿನ ಚಿಂತ್ಯಾಕ', ಕೃಪಾಕರ ಸೇನಾನಿಯವರ 'ಕೆನ್ನಾಯಿಯ ಜಾಡಿನಲ್ಲಿ', ತರಹದ ಕೃತಿಗಳನ್ನು ಹುಡುಕಾಡಿ ಓದುವೆ. ಈ ಪಟ್ಟಿಯಲ್ಲಿ ಕನ್ನಡ ಓದುಗರಿಗೆ ಅಷ್ಟೇನು ಪರಿಚಿತವಿರದ ಪರಂಜ್ಯೋತಿಯವರ 'ಮಂಜಿನೆಡೆಯ ಚಿತ್ರಗಳು' ಪುಸ್ತಕವೂ ಸೇರಿದೆ. ಪರಂಜ್ಯೋತಿಯವರು ಈ ಪುಸ್ತಕವನ್ನು ನವಕರ್ನಾಟಕ ಪ್ರಕಾಶನದ ಕಚೇರಿಗೆ ಹೋದಾಗ ಸ್ವತಃ ಕೊಟ್ಟಿದ್ದರು. ಅಲ್ಲಿನ ಸಂಪಾದಕ ಮಂಡಲಿಯಲ್ಲಿ ಕೆಲಸ ಮಾಡುತ್ತಿದ್ದ ಅವರು, ನಾನು ಹೋದಾಗ ಕರಡನ್ನು ತಿದ್ದುತ್ತ ಕೂತಿದ್ದರು. ಅವರು ನನ್ನ ಪ್ರವಾಸ ಬರಹಗಳನ್ನು ಮೆಚ್ಚಿಕೊಂಡು ಪತ್ರ ಬರೆಯುತ್ತಿದ್ದವರು. ಅವರೊಬ್ಬ ಮುಗುಳುನಗೆಯ ಮೆಲುದನಿಯ ಸಂಕೋಚ ಸ್ವಭಾವದ ವ್ಯಕ್ತಿ. ಅವರನ್ನು ಮುಖತಃ ಕಂಡಿದ್ದು ಅದುವೇ ಮೊದಲು, ಅದುವೇ ಕೊನೆ.